# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತಾರನೆಯ ಅಧಿವೇಶನ

## ಕಾರ್ಯಕಲಾಪಗಳ ಪಟ್ಟಿ

## ಗುರುವಾರ, ದಿನಾಂಕ:21ನೇ ಆಗಸ್ಟ್, 2025

## (ಸಮಯ: ಬೆಳಗ್ಗೆ 10.00 ಗಂಟೆಗೆ)

* * *

### 01. ಸಭೆಯ ಮುಂದಿಡಲಾಗುವ ಕಾಗದ ಪತ್ರ

**ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು) ಅವರು:–**

ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ (2025ರ ವರದಿ ಸಂಖ್ಯೆ–6)ಯನ್ನು ಸಭೆಯ ಮುಂದಿಡುವುದು.

### 02. ವಿತ್ತೀಯ ಕಾರ್ಯಕಲಾಪ

**ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು) ಅವರು:–**

2025–26ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತನ್ನು ಒಪ್ಪಿಸುವುದು.

### 03. ವರದಿಯನ್ನೊಪ್ಪಿಸುವುದು

**ಡಾ: ಡಿ ತಿಮ್ಮಯ್ಯ (ಸದಸ್ಯರು, ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ)** ಅವರು ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ 5ನೇ ವರದಿಯನ್ನೊಪ್ಪಿಸುವುದು.

### 04. ಚುನಾವಣಾ ಪ್ರಸ್ತಾವ

**ಶ್ರೀ ಎನ್.ಎಸ್. ಬೋಸ್‌ರಾಜು (ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) ಅವರು:–**

"ವಿಧಾನ ಮಂಡಲದ/ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ಚುನಾವಣೆ ನಡೆಸುವ ಬದಲು ಮಾನ್ಯ ಸದಸ್ಯರುಗಳನ್ನು ನಾಮನಿರ್ದೇಶಿಸಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಬಗ್ಗೆ ಪ್ರಸ್ತಾವವನ್ನು ಮಂಡಿಸುವುದು".

## 05. ಶಾಸನ ರಚನೆ

### ಅ) ವಿಧೇಯಕಗಳನ್ನು ಹಿಂಪಡೆಯುವುದು

01. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2024

**ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು) ಅವರು:–**

ಅ) "ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2024"ನ್ನು ಹಿಂಪಡೆಯಲು ಅನುಮತಿ ಕೋರುವುದು;

ಆ) ಹಾಗೂ ವಿಧೇಯಕವನ್ನು ಹಿಂಪಡೆಯುವುದು.

02. ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2024

**ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು) ಅವರು:–**

ಅ) "ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2024"ನ್ನು ಹಿಂಪಡೆಯಲು ಅನುಮತಿ ಕೋರುವುದು;

ಆ) ಹಾಗೂ ವಿಧೇಯಕವನ್ನು ಹಿಂಪಡೆಯುವುದು.

03. ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2024

**ಶ್ರೀ ಕೃಷ್ಣ ಭೈರೇಗೌಡ (ಮಾನ್ಯ ಕಂದಾಯ ಸಚಿವರು)**

ಅ) "ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2024"ನ್ನು ಹಿಂಪಡೆಯಲು ಅನುಮತಿ ಕೋರುವುದು;

ಆ) ಹಾಗೂ ವಿಧೇಯಕವನ್ನು ಹಿಂಪಡೆಯುವುದು.

### ಆ) ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

01. ಗ್ರೇಟರ್ ಬೆಂಗಳೂರು ಆಡಳಿತ (ತಿದ್ದುಪಡಿ) ವಿಧೇಯಕ, 2025

**ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಉಪ ಮುಖ್ಯಮಂತ್ರಿಗಳು) ಅವರು:–**

ಅ) ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ "ಗ್ರೇಟರ್ ಬೆಂಗಳೂರು ಆಡಳಿತ (ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ) ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

02. ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ವಿಧೇಯಕ, 2025

**ಶ್ರೀ ಹೆಚ್.ಕೆ. ಪಾಟೀಲ (ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು) ಅವರು:–**

ಅ) ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ "ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ) ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

.3..

03. ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025

**ಶ್ರೀ ಹೆಚ್.ಕೆ. ಪಾಟೀಲ (ಮಾನ್ಯ ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು) ಅವರು:–**

ಅ) ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ "ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ) ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

04. ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ವಿಧೇಯಕ, 2025

**ಡಾ: ಜಿ. ಪರಮೇಶ್ವರ (ಮಾನ್ಯ ಗೃಹ ಸಚಿವರು) ಅವರು:–**

ಅ) ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ "ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ) ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

05. ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025

**ಶ್ರೀ ಎನ್.ಎಸ್. ಬೋಸರಾಜು (ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) ಅವರು:–**

ಅ) ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ "ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ) ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

06. ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) ತಿದ್ದುಪಡಿ ವಿಧೇಯಕ, 2025

**ಶ್ರೀ ಮಂಕಾಳ ಎಸ್ ವೈದ್ಯ (ಮಾನ್ಯ ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು) ಅವರು:–**

ಅ) ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ "ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) ತಿದ್ದುಪಡಿ ವಿಧೇಯಕ"ವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ) ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

07. ಗದಗ–ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025

**ಶ್ರೀ ರಹೀಂ ಖಾನ್ (ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು) ಅವರು:–**

ಅ) ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ "ಗದಗ–ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ) ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

08. ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2025

**ಶ್ರೀ ರಹೀಂ ಖಾನ್ (ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು) ಅವರು:–**

ಅ) ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ "ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ) ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

## 06. ಪ್ರಶ್ನೋತ್ತರ

ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಎಂಟನೆಯ ಪಟ್ಟಿ

ಆ) <u>**ತಡೆಹಿಡಿಯಲಾದ ಪ್ರಶ್ನೆ:**</u>

| | |
|---|---|
| 4ನೇ ಪಟ್ಟಿಯಿಂದ ತಡೆಹಿಡಿಯಲಾದ **ಡಾ: ಧನಂಜಯ ಸರ್ಜಿ** ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 54(558)<br>4ನೇ ಪಟ್ಟಿಯಿಂದ ತಡೆಹಿಡಿಯಲಾದ **ಶ್ರೀ ಸಿ.ಎನ್. ಮಂಜೇಗೌಡ** ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 60(522) | ಮಾನ್ಯ ಮುಖ್ಯಮಂತ್ರಿಗಳು |
| 1ನೇ ಪಟ್ಟಿಯಿಂದ ತಡೆಹಿಡಿಯಲಾದ **ಶ್ರೀ ತಿಪ್ಪಣ್ಣಪ್ಪ ಕಮಕನೂರ** ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 13(133) | ಮಾನ್ಯ ಉಪ ಮುಖ್ಯಮಂತ್ರಿಗಳು |
| 4ನೇ ಪಟ್ಟಿಯಿಂದ ತಡೆಹಿಡಿಯಲಾದ **ಶ್ರೀ ಅಡಗೂರ್ ಹೆಚ್. ವಿಶ್ವನಾಥ್** ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 56(493) | ಮಾನ್ಯ ಗೃಹ ಸಚಿವರು |

ಇ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಎಂಟನೆಯ ಪಟ್ಟಿ

## 07. ಅಧಿಕೃತ ನಿರ್ಣಯಗಳು

ಅ. **ಶ್ರೀ ಎಚ್.ಕೆ. ಪಾಟೀಲ್ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು) ಅವರು ಈ ಕೆಳಕಂಡ ನಿರ್ಣಯವನ್ನು ಮಂಡಿಸುವುದು:–**

"ಸುಸ್ಥಿರ ಶಾಂತಿಯು ಅಂತರರಾಷ್ಟ್ರೀಯ ಸಮುದಾಯದ ಜವಾಬ್ದಾರಿ ಮಾತ್ರವಲ್ಲದೆ, ಸ್ಥಳೀಯ ಸಮುದಾಯಗಳು ಮತ್ತು ಪಾಲುದಾರರು ಸಾಮೂಹಿಕವಾಗಿ ನಿರ್ಮಿಸಬೇಕಾದ ಹಂಚಿಕೆಯ ಬಾಧ್ಯತೆಯಾಗಿರುತ್ತದೆ.

ದಿವ್ಯತೆಯ ಸಂಸ್ಕೃತಿ, ವಿಶ್ವ ಶಾಂತಿ, ಬೆಳಕಿನ ಮರುಸ್ಥಾಪನೆಯಿಂದ (HWPL) ಮಾರ್ಚ್ 14, 2016ರಂದು ಉದ್ಘೋಷಿಸಲಾದ ಶಾಂತಿ ಮತ್ತು ಯುದ್ಧ ನಿಲುಗಡೆ ಘೋಷಣೆಯು (DPCW), ಸಂಘರ್ಷ ತಡೆಗಟ್ಟುವಿಕೆ ಮತ್ತು ಪರಿಹಾರ, ನಿಶ್ಶಸ್ತ್ರೀಕರಣ ಮತ್ತು ಶಾಂತ ಸಂಸ್ಕೃತಿಯ ಪ್ರಸರಣಕ್ಕಾಗಿ ನಿರ್ದಿಷ್ಟ ಉಪಬಂಧಗಳನ್ನು ಒಳಗೊಂಡ ಅಂತರರಾಷ್ಟ್ರೀಯ ಸಮಗ್ರ ಕಾನೂನಾತ್ಮಕ ಚೌಕಟ್ಟಾಗಿ ಕಾರ್ಯನಿರ್ವಹಿಸುತ್ತಿದೆ.

ಶಾಂತಿ ಮತ್ತು ಯುದ್ದ ನಿಲುಗಡೆ ಘೋಷಣೆಯು (DPCW), ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಮಾನದಂಡಗಳು ಮತ್ತು ವಿಶ್ವಸಂಸ್ಥೆ ಸನ್ನದಿನ ತತ್ವಗಳನ್ನು ಆಧರಿಸಿದೆ ಮತ್ತು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಭವಿಷ್ಯದ ಒಪ್ಪಂದಗಳು ಅಥವಾ ನಿರ್ಣಯಗಳಿಗೆ ಕಾರ್ಯಸಾಧ್ಯವಾಗಬಲ್ಲ ಕರಡು ಘೋಷಣೆಯಾಗಿ ಕಾರ್ಯನಿರ್ವಹಿಸುತ್ತಿದೆ.

ಶಾಂತಿ ತತ್ವಗಳ ಅನುಷ್ಠಾನವನ್ನು ಸ್ವಯಂಪ್ರೇರಣೆಯಿಂದ ತಳಮಟ್ಟದಲ್ಲಿಯೇ ಮುನ್ನಡೆಸುತ್ತಿರುವ ಸರ್ಕಾರೇತರ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು, ಯುವ ಸಂಘಟನೆಗಳು ಮತ್ತು ಧಾರ್ಮಿಕ ಸಮುದಾಯಗಳನ್ನು ಒಳಗೊಂಡಂತೆ ಬೆಳೆಯುತ್ತಿರುವ ಭಾರತೀಯ ನಾಗರಿಕ ಸಮಾಜದ ಪಾತ್ರವು ಸ್ಮರಣೀಯವಾಗಿದೆ.

ದಿವ್ಯತೆಯ ಸಂಸ್ಕೃತಿ, ವಿಶ್ವಶಾಂತಿ, ಬೆಳಕಿನ ಮರುಸ್ಥಾಪನೆಯ (HWPL) ಶಾಂತಿ ಉಪಕ್ರಮಗಳಾದ ಯುವ ನಾಯಕತ್ವ ಅಭಿವೃದ್ಧಿ, ಪ್ರತಿಬಂಧಕ ಶಾಂತಿ ಶಿಕ್ಷಣ ಮತ್ತು ನಾಗರಿಕ ಮುಂದಾಳತ್ವದ ಪರಿಸರ ಅಭಿಯಾನಗಳು ಪ್ರತಿನಿಧಿಸುವ ಸ್ವಯಂಪ್ರೇರಿತ  ಪಾಲ್ಗೊಳ್ಳುವಿಕೆ ಮತ್ತು ಸಾರ್ವಜನಿಕ ಹಿತದ ಆಧಾರದ ಮೇಲಿನ ಸಮುದಾಯ ಕೇಂದ್ರಿತ ಶಾಂತಿ ಮಾದರಿಯನ್ನು ಪರಿಗಣಿಸಬೇಕಾಗಿದೆ.

ಶಾಂತಿ ಮತ್ತು ಯುದ್ಧ ನಿಲುಗಡೆ ಘೋಷಣೆಯು (DPCW) ನಮ್ಮ ಕಾಲಘಟ್ಟದ ಶಾಂತಿಯುತ ಸಹಬಾಳ್ವೆಗಾಗಿನ ಘೋಷಣೆ ಮಾತ್ರವಲ್ಲದೆ, ಭವಿಷ್ಯದ ಪೀಳಿಗೆಗಾಗಿ ದೀರ್ಘಾವಧಿಯ ಕಾನೂನಾತ್ಮಕ ಮಾನದಂಡ ಮತ್ತು ಸಾಂಸ್ಥಿಕ ನೀಲನಕ್ಷೆಯಾಗಿ, ಶಾಂತಿಯನ್ನು ಶಾಶ್ವತ ಪರಂಪರೆಯಾಗಿ ಸಮರ್ಪಿಸುವುದನ್ನು ದೃಢೀಕರಿಸಬೇಕಾಗಿದೆ.

**ಆದ್ದರಿಂದ, ಈ ಸದನವು ಸರ್ವಾನುಮತದಿಂದ ಈ ಮೂಲಕ ಕೆಳಗಿನಂತೆ ನಿರ್ಣಯಿಸುತ್ತದೆ:-**

1) ಶಾಂತಿ ಮತ್ತು ಯುದ್ಧ ನಿಲುಗಡೆ ಘೋಷಣೆಯಲ್ಲಿ (DPCW) ಪ್ರತಿಪಾದಿಸಲಾದ ತತ್ವಗಳು ಮತ್ತು ಲೇಖನಗಳಿಗೆ ಸಂಪೂರ್ಣ ಬೆಂಬಲವನ್ನು ಘೋಷಿಸುತ್ತದೆ.
2) ಶಾಂತಿ ಶಿಕ್ಷಣ, ಸಮುದಾಯ ಆಧಾರಿತ ಪರಿಸರ ಉಪಕ್ರಮಗಳು ಮತ್ತು ಸಾಂಸ್ಕೃತಿಕ ವೈವಿಧ್ಯತೆಯ ಜಾಗೃತಿ ಅಭಿಯಾನಗಳನ್ನು ಒಳಗೊಂಡ ಕಾರ್ಯಕ್ರಮಗಳನ್ನು ಜಂಟಿಯಾಗಿ  ಅಭಿವೃದ್ಧಿಪಡಿಸಲು ಮತ್ತು ಕಾರ್ಯಗತಗೊಳಿಸಲು ದಿವ್ಯತೆಯ ಸಂಸ್ಕೃತಿ, ವಿಶ್ವಶಾಂತಿ, ಬೆಳಕಿನ ಮರುಸ್ಥಾಪನೆಯೊಂದಿಗೆ (HWPL) ಸಹಭಾಗಿ ಹಂದರವನ್ನು (framework) ಸ್ಥಾಪಿಸಲು ಬದ್ಧವಾಗಿರುತ್ತದೆ.
3) ಶಾಂತಿ ಮತ್ತು ಯುದ್ಧ ನಿಲುಗಡೆ ಘೋಷಣೆಯಲ್ಲಿನ (DPCW) ಶಾಸನಾತ್ಮಕ ಚರ್ಚೆಗಳನ್ನು ಮತ್ತು ವ್ಯಾಪಕ ಪ್ರಸರಣವನ್ನು ಉತ್ತೇಜಿಸುವುದಕ್ಕಾಗಿ, ಈ ನಿರ್ಣಯವನ್ನು ಕೇಂದ್ರ ಸರ್ಕಾರ ಮತ್ತು ಇತರ ರಾಜ್ಯ ಸರ್ಕಾರಗಳೊಂದಿಗೆ ಹಂಚಿಕೊಳ್ಳಲು ಶಿಫಾರಸ್ಸು ಮಾಡುತ್ತದೆ.

4) ಶಾಂತಿ ಮತ್ತು ಯುದ್ಧ ನಿಲುಗಡೆ ಘೋಷಣೆಯ (DPCW) ಆಧಾರದ ಮೇಲೆ "ಸುಸ್ಥಿರ ಶಾಂತಿ ಗ್ರಾಮಗಳು" ಅಥವಾ "ಶಾಂತಿ ನಗರಗಳು" ಎಂಬ ಪದನಾಮದ ಪ್ರಾಯೋಗಿಕ ಅನುಷ್ಠಾನವನ್ನು ಬೆಂಬಲಿಸುತ್ತದೆ ಮತ್ತು ಈ ಪ್ರಯತ್ನಗಳನ್ನು ವಿಸ್ತರಿಸುವುದಕ್ಕಾಗಿ ಅಂತರ-ನಗರ ಸಹಕಾರವನ್ನು ಪ್ರೋತ್ಸಾಹಿಸುತ್ತದೆ.

5) ಶಾಂತಿ ಮತ್ತು ಯುದ್ಧ ನಿಲುಗಡೆ ಘೋಷಣೆಯಲ್ಲಿನ (DPCW) ಅನುಚ್ಛೇದ 10ರಲ್ಲಿ ವಿವರಿಸಿರುವ ತತ್ವಗಳನ್ನು ಒಳಗೊಂಡಂತೆ ನಾಗರಿಕ ಪಾಲ್ಗೊಳ್ಳುವಿಕೆ, ಶಾಂತಿ ಶಿಕ್ಷಣ ಮತ್ತು ಸಾಂಸ್ಕೃತಿಕ ಪ್ರಸರಣವನ್ನು ಸ್ಥಳೀಯ ಸರ್ಕಾರದ ಶಾಂತಿ ನೀತಿಗಳು ಮತ್ತು ಯೋಜನಾ ಚೌಕಟ್ಟುಗಳಲ್ಲಿ ಸಂಯೋಜಿಸಲಾಗುತ್ತಿದೆ ಎಂಬುದನ್ನು ಖಾತ್ರಿಪಡಿಸುತ್ತದೆ.

6) ಈ ನಿರ್ಣಯವು ರಾಷ್ಟ್ರೀಯ ಮಟ್ಟದಲ್ಲಿ ವೈಯಕ್ತಿಕ ನಿರ್ಣಯಗಳ ಸಂಭಾವ್ಯ ಸಲ್ಲಿಕೆಯನ್ನು ಬೆಂಬಲಿಸಲು ಒಂದು ಮೂಲಭೂತ ದಸ್ತಾವೇಜಿನಂತೆ ಕಾರ್ಯನಿರ್ವಹಿಸುತ್ತದೆ ಹಾಗೂ ಇದನ್ನು ದಾಖಲಿಸುವುದಕ್ಕಾಗಿ ಮತ್ತು ಹೆಚ್ಚಿನ ತೊಡಗಿಸಿಕೊಳ್ಳುವಿಕೆಗಾಗಿ ಸಂಬಂಧಪಟ್ಟ ಮಂತ್ರಾಲಯಗಳು ಮತ್ತು ವಿಶ್ವಸಂಸ್ಥೆಯ ಮಾಹಿತಿ ಕೇಂದ್ರಕ್ಕೆ ಕಳುಹಿಸಲಾಗುವುದೆಂದು ಈ ಮೂಲಕ ಘೋಷಿಸುತ್ತದೆ."

ಆ. **ಶ್ರೀ ದಿನೇಶ್ ಗುಂಡೂರಾವ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) ಅವರು ಈ ಕೆಳಕಂಡ ನಿರ್ಣಯವನ್ನು ಮಂಡಿಸುವುದು:-**

"ಭಾರತ ಸಂವಿಧಾನದ 252ನೇ ಅನುಚ್ಛೇದದ ಖಂಡ(1)ರಡಿ ಮತ್ತು ಸದರಿ ಅಧಿನಿಯಮದಲ್ಲಿನ 1ನೇ ಪ್ರಕರಣದ (3)ನೇ ಉಪ ಪ್ರಕರಣದಡಿಯಲ್ಲಿ ಅಗತ್ಯಪಡಿಸಿದಂತೆ, ಮಾನವ ಅಂಗಾಂಗ ಕಸಿ (ತಿದ್ದುಪಡಿ) ಅಧಿನಿಯಮ, 2011 (2011ರ ಕೇಂದ್ರ ಅಧಿನಿಯಮ 16) ಅನ್ನು ಕರ್ನಾಟಕ ರಾಜ್ಯದಲ್ಲಿ ಅಳವಡಿಸಿಕೊಳ್ಳಲು ಈ ಸದನವು ಸರ್ವಾನುಮತದಿಂದ ನಿರ್ಣಯಿಸುತ್ತದೆ."

## 08. ಗಮನ ಸೆಳೆಯುವ ಸೂಚನೆಗಳು

01. **ಶ್ರೀ ಐವನ್ ಡಿ'ಸೋಜಾ** ಅವರು ಭಾರತ ಸಂವಿಧಾನದ ಅನುಚ್ಛೇದ 341(1)ರಂತೆ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಕುಡುಬಿ ಸಮುದಾಯದ ಹೆಸರು "ದಿ ಷೆಡ್ಯೂಲ್ಡ್ ಕ್ಯಾಸ್ಟಸ್ ಅಂಡ್ ಷೆಡ್ಯೂಲ್ಡ್ ಟ್ರೈಬ್ಸ್ ಲಿಸ್ಟ್ (ಮಾಡಿಫಿಕೇಷನ್) ಆರ್ಡರ್ 1956" ರಲ್ಲಿ ಬಿಟ್ಟುಹೋಗಿದ್ದು, ಕುಡುಬಿ ಜಾತಿಯ ಹೆಸರನ್ನು ಸೇರಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಕ್ರಮಕೈಗೊಳ್ಳುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನ ಸೆಳೆಯುವುದು.

02. **ಶ್ರೀಯುತರುಗಳಾದ ಶಶೀಲ್ ಜಿ. ನಮೋಶಿ, ಎಸ್.ವ್ಹಿ. ಸಂಕನೂರ, ನಿರಾಣಿ ಹಣಮಂತ್ ರುದ್ರಪ್ಪ, ಸಿ.ಟಿ. ರವಿ ಹಾಗೂ ಇತರರು** ರಾಜ್ಯದಲ್ಲಿ ಸರ್ಕಾರವು ನೂತನ ರಾಜ್ಯ ಶಿಕ್ಷಣ ನೀತಿಯ ಬಗ್ಗೆ ಸನ್ಮಾನ್ಯ ಸುಖದೇವ್ ಥೋರಟ್ ರವರ ನೇತೃತ್ವದಲ್ಲಿ ರಚಿಸಿರುವ ಸಮಿತಿಯ ವರದಿಯನ್ನು ಅನುಷ್ಠಾನಗೊಳಿಸುತ್ತಿರುವ ಕುರಿತು ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಗಮನ ಸೆಳೆಯುವುದು.

೦3. **ಡಾ: ಕೆ. ಗೋವಿಂದರಾಜ್** ಅವರು ಉತ್ತಮ ಹಾಗೂ ಪರಿಣಾಮಕಾರಿ ಆಡಳಿತಕ್ಕಾಗಿ ಬಿಬಿಎಂಪಿ ವ್ಯಾಪ್ತಿಯನ್ನು ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಐದು ನಗರ ಪಾಲಿಕೆಗಳನ್ನಾಗಿ ರಚಿಸಲಾದಂತೆ ಅಪರಾಧ ಪ್ರಕರಣಗಳನ್ನು ಕಡಿಮೆ ಮಾಡುವುದು, ತನಿಖೆಯಲ್ಲಿ ಗುಣಮಟ್ಟ ಹೆಚ್ಚಿಸುವುದು ಹಾಗೂ ಆರೋಪಿಗಳನ್ನು ತ್ವರಿತವಾಗಿ ಬಂಧಿಸಿ ಕ್ರಮಕೈಗೊಳ್ಳಲು ನೆರವಾಗಲು ಬೆಂಗಳೂರು ಪೊಲೀಸ್ ಕಮೀಷನರೇಟನ್ನು ಎರಡು ವಿಭಾಗಗಳನ್ನಾಗಿ ವಿಂಗಡಿಸಿ ಹಾಲಿ ಇರುವ ಪೊಲೀಸ್ ಆಯುಕ್ತರ ಜೊತೆಗೆ ಮತ್ತೊಂದು ಪೊಲೀಸ್ ಆಯುಕ್ತರು ಹಾಗೂ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳ ಹುದ್ದೆಗಳನ್ನು ಸೃಜಿಸುವ ಕುರಿತು ಮಾನ್ಯ ಗೃಹ ಸಚಿವರ ಗಮನ ಸೆಳೆಯುವುದು.

೦4. **ಶ್ರೀ ಕಿಶೋರ್ ಕುಮಾರ್ ಪುತ್ತೂರ್** ಅವರು ರಾಜ್ಯದಲ್ಲಿ ಅತಿವೃಷ್ಟಿ/ಪ್ರವಾಹದಿಂದ ಹಾನಿಗೊಳಗಾದ ಮನೆಗಳಿಗೆ ಪುನರ್ ನಿರ್ಮಾಣಕ್ಕೆ ನೀಡಲಾಗುತ್ತಿರುವ ಪರಿಹಾರದ ಮೊತ್ತವನ್ನು ಹೆಚ್ಚಿಸುವ ಕುರಿತು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುವುದು.

೦5. **ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.** ಅವರು **'**ಕೃಷಿ ಯಂತ್ರಧಾರೆ**'** ಮಹತ್ವಾಕಾಂಕ್ಷಿ ಯೋಜನೆಗೆ ಅನುದಾನದ ಕೊರತೆಯಿಂದಾಗಿ ಕೃಷಿ ಯಂತ್ರಧಾರೆ ಕೇಂದ್ರಗಳು ಸೂಕ್ತ ನಿರ್ವಹಣೆ ಇಲ್ಲದೆ ಸ್ಥಗಿತಗೊಂಡಿರುವುದರಿಂದ ಸಣ್ಣ ಹಾಗೂ ಅತೀ ಸಣ್ಣ ರೈತರು ಸಂಕಷ್ಟಕ್ಕೆ ಸಿಲುಕಿರುವ ಕುರಿತು ಮಾನ್ಯ ಕೃಷಿ ಸಚಿವರ ಗಮನ ಸೆಳೆಯುವುದು.

೦6. **ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)** ಅವರು ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಸಮುದಾಯಗಳಲ್ಲಿ ಅಲೆಮಾರಿ/ಅರೆ ಅಲೆಮಾರಿ ಸಮಾಜಗಳಿಗೆ ವಸತಿ ಯೋಜನೆಯಡಿ ನೆಲೆ ಕಲ್ಪಿಸಲು ಮತ್ತು ಮೂಲಭೂತ ಸೌಕರ್ಯ ಒದಗಿಸಲು ಯೋಜನೆಗಳನ್ನು ರೂಪಿಸುವ ಕುರಿತು ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಗಮನ ಸೆಳೆಯುವುದು.

೦7. **ಶ್ರೀ ಟಿ.ಎನ್. ಜವರಾಯಿ ಗೌಡ** ಅವರು ಬಾರಗೇನಹಳ್ಳಿ ಸುತ್ತಮುತ್ತಲಿನ ಕಂದಾಯ ಇಲಾಖೆಗೆ ಸೇರಿದ ಗೋಮಾಳ ಜಮೀನಿನಲ್ಲಿ ಹೊರೈಜೂನ್ ಇಂಡಸ್ಟ್ರಿಯಲ್ ಕಂಪನಿಯು ಕಾನೂನು ಬಾಹಿರವಾಗಿ ಬಂಡೆಗಳ ಸ್ಫೋಟ ಮತ್ತು ಕ್ರಷರ್ ಚಟುವಟಿಕೆಗಳಿಂದ ಸುತ್ತಮುತ್ತಲಿನ ಪ್ರದೇಶದ ಪರಿಸರ ಹಾಳಾಗಿರುವುದರಿಂದ, ಹೊರೈಜೂನ್ ಇಂಡಸ್ಟ್ರಿಯಲ್ ಕಂಪನಿಯ 125 ಎಕರೆಯ ಗೋಮಾಳ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವ ಕುರಿತು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುವುದು.

## 09. ನಿಯಮ 330ರ ಮೇರೆಗೆ

೦1. **ಶ್ರೀಯುತರುಗಳಾದ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು, ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು, ಮಾನ್ಯ ಶಾಸಕರುಗಳಾದ ಸಿ.ಟಿ. ರವಿ, ಸುನೀಲ್ ವಲ್ಯಾಪುರ್, ಎಸ್.ಎಲ್. ಭೋಜೇಗೌಡ ಹಾಗೂ ಇತರರು** ಪರಿಶಿಷ್ಠ ಜಾತಿ ಅಡಿಯಲ್ಲಿ ಬರುವ ವಿವಿಧ ಸಮುದಾಯಗಳಿಗೆ ಒಳಮೀಸಲಾತಿಯನ್ನು ಅನುಷ್ಠಾನಗೊಳಿಸುವ ಕುರಿತು ಮುಂದುವರೆದ ಚರ್ಚೆ. (ಮಾನ್ಯ ಸಮಾಜ ಕಲ್ಯಾಣ ಸಚಿವರು)

೦2. **ಶ್ರೀಯುತರುಗಳಾದ ಸಿ.ಟಿ. ರವಿ, ಎಸ್.ವ್ಹಿ. ಸಂಕನೂರ, ನಿರಾಣಿ ಹಣಮಂತ್ ರುದ್ರಪ್ಪ, ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು, ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರರು** ರಾಜ್ಯದಲ್ಲಿ ಬಾಲಕಿಯರ ಮತ್ತು ಮಹಿಳೆಯರ ಮೇಲೆ ದೌರ್ಜನ್ಯ, ಕೊಲೆ, ಅತ್ಯಾಚಾರ, ಗಲಭೆ, ಸುಲಿಗೆ, ಡ್ರಗ್ಸ್ ಹಾಗೂ ಇನ್ನಿತರೆ ಅಪರಾಧ ಪ್ರಕರಣಗಳನ್ನು ತಡೆಯುವಲ್ಲಿ ಕಾನೂನು ಸುವ್ಯವಸ್ಥೆ ವಿಫಲವಾಗಿರುವ ಕುರಿತು ಪ್ರಸ್ತಾಪಿಸುವುದು. (ಮಾನ್ಯ ಗೃಹ ಸಚಿವರು)

.8..

೦೩. **ಶ್ರೀಯುತರುಗಳಾದ ರಾಮೋಜಿಗೌಡ, ಪುಟ್ಟಣ್ಣ ಹಾಗೂ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)** ಅವರುಗಳು ಕರ್ನಾಟಕದಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ವೃದ್ಧಿಸುವ ಸಂಬಂಧ ಸರ್ಕಾರದಿಂದ ಶೈಕ್ಷಣಿಕ ಕಾನೂನುಗಳಿಗೆ ತಿದ್ದುಪಡಿ ತಂದು ಕಾರ್ಯಯೋಜನೆಗಳನ್ನು ಅನುಷ್ಠಾನಗೊಳಿಸುವ ಕುರಿತು ಪ್ರಸ್ತಾಪಿಸುವುದು. (ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರು)

೦೪. **ಶ್ರೀ ಡಿ.ಎಸ್. ಅರುಣ್** ಅವರು 7ನೇ ವೇತನ ಆಯೋಗದ ವರದಿ ಅನ್ವಯ ದಿನಾಂಕ:01.07.2022ರಿಂದ ಜಾರಿಗೆ ಬರುವಂತೆ ವಿಶೇಷಚೇತನ ಸರ್ಕಾರಿ ನೌಕರರಿಗೆ ವಾಹನ ಖರೀದಿಸಲು ರೂ.60,000/-ಗಳ ಮಿತಿ ಅಥವಾ ವಾಹನ ದರದ ಶೇಕಡ 40ರಷ್ಟು ಹೆಚ್ಚಿಸುವ ಕುರಿತು ಪ್ರಸ್ತಾಪಿಸುವುದು. (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು)

೦೫. **ಶ್ರೀ ಗೋವಿಂದರಾಜು** ಅವರು ರಾಜ್ಯ ಸರ್ಕಾರ ಹೊಸ ಮಧ್ಯದಂಗಡಿಗಳ ಅನುಮತಿಗೆ ಸಂಬಂಧಿಸಿದ ಸಿ.ಎಲ್-7 ಸನ್ನಧಿಗೆ ನಿಗದಿಪಡಿಸಿರುವ ನಿಯಮಗಳನ್ನು ಗಾಳಿಗೆ ತೂರಿ ಪ್ರವಾಸೋದ್ಯಮದ ಹೆಸರಿನಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿರುವ ಕುರಿತು ಪ್ರಸ್ತಾಪಿಸುವುದು.(ಮಾನ್ಯ ಅಬಕಾರಿ ಸಚಿವರು)

೦೬. **ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎನ್. ರವಿಕುಮಾರ, ಮಾನ್ಯ ಶಾಸಕರುಗಳಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ, ಶ್ರೀ ಪಿ.ಹೆಚ್. ಪೂಜಾರ್, ಶ್ರೀ ಎಸ್.ವ್ಹಿ. ಸಂಕನೂರ ಹಾಗೂ ಶ್ರೀ ಕಿಶೋರ್ ಕುಮಾರ್ ಪುತ್ತೂರ್** ಅವರುಗಳು ರಾಜ್ಯದಲ್ಲಿ ರಸಗೊಬ್ಬರಗಳ ಕೊರತೆ, ಕಳಪೆ ಬಿತ್ತನೆ ಬೀಜಗಳ ಪೂರೈಕೆ, ಅಸಮರ್ಪಕ ವಿದ್ಯುತ್ ಪೂರೈಕೆಗಳಿಂದಾಗಿ ರೈತರು ತೀವ್ರ ಸಂಕಷ್ಟಕ್ಕೆ ಒಳಗಾಗಿರುವ ವಿಷಯದ ಕುರಿತು ಪ್ರಸ್ತಾಪಿಸುವುದು.(ಮಾನ್ಯ ಕೃಷಿ ಸಚಿವರು)

೦೭. **ಶ್ರೀ ಶರವಣ ಟಿ.ಎ.** ಅವರು ಕರ್ನಾಟಕದ ಶಾಸಕರುಗಳಿಗೆ ತಿರುಪತಿಯಲ್ಲಿ ಶ್ರೀ ವೆಂಕಟೇಶ್ವರ ಸ್ವಾಮಿ ದರ್ಶನ ಪಡೆಯಲು ವಾರದಲ್ಲಿ ಮೂರು ದಿನ ಶಿಫಾರಸ್ಸು ಪತ್ರದ ಆಧಾರದ ಮೇಲೆ ಅವಕಾಶ ಕಲ್ಪಿಸಲು ಆಂಧ್ರಪ್ರದೇಶದ ಮುಖ್ಯಮಂತ್ರಿಯವರಿಗೆ ನಿಯೋಗ ಕಳುಹಿಸುವ ವಿಚಾರದ ಕುರಿತು ಪ್ರಸ್ತಾಪಿಸುವುದು.(ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು)

೦೮. **ಶ್ರೀಯುತರುಗಳಾದ ಅಡಗೂರ್ ಹೆಚ್. ವಿಶ್ವನಾಥ್, ಪುಟ್ಟಣ್ಣ ಹಾಗೂ ಹೆಚ್.ಪಿ. ಸುಧಾಮ್ ದಾಸ್** ಅವರುಗಳು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಮಂಡ್ಯದಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ನಡೆದಿರುವ ಭ್ರಷ್ಟಾಚಾರದ ಕುರಿತು ಪ್ರಸ್ತಾಪಿಸುವುದು. (ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

೦೯. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ಕೃಷ್ಣ ಮೇಲ್ದಂಡೆ ಯೋಜನೆಗಾಗಿ 176 ಗ್ರಾಮಗಳಲ್ಲಿನ 5 ಲಕ್ಷಕ್ಕಿಂತ ಹೆಚ್ಚು ಸಂತ್ರಸ್ತ ರೈತ ಕುಟುಂಬಗಳು ತಮ್ಮ ಜಮೀನುಗಳನ್ನು ಕಳೆದುಕೊಂಡು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಹಾಗೂ ಅವರ ಜೀವನ ನಿರ್ವಹಣೆಗೆ ಸರ್ಕಾರ ಕೈಗೊಂಡ ಕ್ರಮಗಳ ಕುರಿತು ಪ್ರಸ್ತಾಪಿಸುವುದು. (ಮಾನ್ಯ ಉಪ ಮುಖ್ಯಮಂತ್ರಿಗಳು)

೧೦. **ಶ್ರೀಯುತರುಗಳಾದ ಹೇಮಲತಾ ನಾಯಕ, ಕಿಶೋರ್ ಕುಮಾರ್ ಪುತ್ತೂರ್, ಡಾ:ತಳವಾರ್ ಸಾಬಣ್ಣ, ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು** ಅವರುಗಳು ಕೊಪ್ಪಳದಲ್ಲಿ ವಾಲ್ಮೀಕಿ ಸಮುದಾಯದ ಹಿಂದೂ ಕಾರ್ಯಕರ್ತರನ್ನು ಅನ್ಯ ಸಮುದಾಯದ ವ್ಯಕ್ತಿ ಮಚ್ಚಿನಿಂದ ಹತ್ಯೆ ಮಾಡಿರುವ ಪ್ರಕರಣವನ್ನು ರಾಷ್ಟ್ರೀಯ ತನಿಖಾ ದಳ ಅಥವಾ ಸಿಬಿಐಗೆ ವಹಿಸುವ ಕುರಿತು ಪ್ರಸ್ತಾಪಿಸುವುದು. (ಮಾನ್ಯ ಗೃಹ ಸಚಿವರು)

11. **ಶ್ರೀ ಎಸ್.ವ್ಹಿ. ಸಂಕನೂರ ಮತ್ತು ಶ್ರೀ ಎಸ್.ಎಲ್. ಭೋಜೇಗೌಡ** ಅವರುಗಳು ಧಾರವಾಡದಲ್ಲಿರುವ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯುತ್ತಿರುವ ಸಮುದಾಯ ವಿಜ್ಞಾನ ಮಹಾವಿದ್ಯಾಲಯದ ಕಟ್ಟಡ ಶಿಥಿಲಗೊಂಡಿದ್ದು, ದುರಸ್ಥಿಗೊಳಿಸುವ ಹಾಗೂ ಸಮುದಾಯ ವಿಜ್ಞಾನ ಪದವಿ ಪಡೆದ ವಿದ್ಯಾರ್ಥಿಗಳಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನೇಮಕಾತಿಯಲ್ಲಿ ಆದ್ಯತೆ ನೀಡದಿರುವುದರಿಂದ ಹಾಗೂ ಕೆ.ಪಿ.ಎಸ್.ಸಿ ಸ್ಪರ್ಧಾತ್ಮಕ ಪರೀಕ್ಷೆಗಳ ಪಠ್ಯಕ್ರಮದಲ್ಲಿ ಸಮುದಾಯ ವಿಜ್ಞಾನ ಸೇರ್ಪಡೆ ಮಾಡದೆ ಅನ್ಯಾಯವಾಗುತ್ತಿರುವ ಕುರಿತು ಪ್ರಸ್ತಾಪಿಸುವುದು. (ಮಾನ್ಯ ಕೃಷಿ ಸಚಿವರು)

## 10. ಮಕ್ಕಳ ಶಿಕ್ಷಣದ ಕುರಿತು ವಿಶೇಷ ಚರ್ಚೆ

ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿರುವುದು, ಪೋಕ್ಸೋ (POCSO) ಕಾಯ್ದೆಯಡಿ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗುತ್ತಿರುವುದರಿಂದ ಮಕ್ಕಳ ಭವಿಷ್ಯದ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳನ್ನು ತಪ್ಪಿಸಲು ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಸೂಕ್ತ ಅರಿವು ಮೂಡಿಸುವ ಶಿಕ್ಷಣ ನೀಡುವ ವ್ಯವಸ್ಥೆ ಜಾರಿಗೆ ತರುವ ಕುರಿತು ವಿಶೇಷ ಚರ್ಚೆ.

## 11. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆ

| | |
|---|---|
| ಅ. **ಶ್ರೀಯುತರುಗಳಾದ: ಎನ್. ರವಿಕುಮಾರ್ ಹಾಗೂ ಕೆ.ಎಸ್. ನವೀನ್** | ಪಶುಸಂಗೋಪನೆ ಇಲಾಖೆಯಲ್ಲಿನ ಮೊಬೈಲ್ ಆಂಬುಲೆನ್ಸ್‌ಗಳ ನಿರ್ವಹಣೆಯಲ್ಲಿ ಆಗುತ್ತಿರುವ ಭ್ರಷ್ಟಾಚಾರದ ಕುರಿತು |
| ಆ. **ಶ್ರೀಯುತರುಗಳಾದ: ಮಂಜುನಾಥ್ ಭಂಡಾರಿ, ಎಂ.ಎಲ್. ಅನಿಲ್ ಕುಮಾರ್ ಹಾಗೂ ದಿನೇಶ್ ಗೂಳಿಗೌಡ** | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಯೋಜನಾ ಪ್ರಾಧಿಕಾರದ ಹೊರಗಿರುವ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಮನೆಗಳ ನಿರ್ಮಾಣಕ್ಕೆ ಕಟ್ಟಡ ಪರವಾನಗಿ ಪಡೆಯಲು ತೊಂದರೆಯಾಗುತ್ತಿರುವ ಕುರಿತು |
| ಇ. **ಶ್ರೀಯುತರುಗಳಾದ: ಸುನೀಲ್ ವಲ್ಯಾಪುರ್, ಶಶೀಲ್ ಜಿ. ನಮೋಶಿ, ಡಾ: ತಳವಾರ್ ಸಾಬಣ್ಣ, ಬಿ.ಜಿ. ಪಾಟೀಲ್, ಹೇಮಲತಾ ನಾಯಕ್** | ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಅನುದಾನ ಮಂಜೂರು ಮಾಡುವ ಹಾಗೂ ಸದರಿ ಭಾಗದಲ್ಲಿನ ಅಭಿವೃದ್ಧಿ ಯೋಜನೆಗಳ ಕುರಿತು |

## 12. ಅರ್ಧ ಗಂಟೆ ಕಾಲಾವಧಿ ಚರ್ಚೆ

ಅ. ರಾಜ್ಯಾದ್ಯಂತ ಸರ್ಕಾರದ ಸ್ಮಾರ್ಟ್ ಮೀಟರ್ ಅಳವಡಿಕೆಗೆ ನಿರ್ಧರಿಸಿರುವ ಬಗ್ಗೆ ದಿನಾಂಕ:11.08.2025ರ ಚುಕ್ಕೆ ಗುರುತಿನ **ಪ್ರಶ್ನೆ ಸಂಖ್ಯೆ:05(34) ಮತ್ತು 12(142)ಕ್ಕೆ** ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಶ್ರೀ ಸಿ.ಟಿ. ರವಿ ಮತ್ತು ಶ್ರೀ ಶರವಣ ಟಿ.ಎ** ಅವರುಗಳಿಂದ ಅರ್ಧ ಗಂಟೆ ಕಾಲಾವಧಿ ಚರ್ಚೆ.

ಆ. ನಗರ ಸ್ಥಳೀಯ ಸಂಸ್ಥೆಗಳ ಸದಸ್ಯರುಗಳ ಗೌರವಧನ ಹೆಚ್ಚಳ ಕುರಿತು ದಿನಾಂಕ:12.08.2025ರ ಚುಕ್ಕೆ ಗುರುತಿನ **ಪ್ರಶ್ನೆ ಸಂಖ್ಯೆ:22(253)ಕ್ಕೆ** ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಶ್ರೀ ಸುನೀಲ್‌ಗೌಡ ಪಾಟೀಲ್** ಅವರಿಂದ ಅರ್ಧ ಗಂಟೆ ಕಾಲಾವಧಿ ಚರ್ಚೆ.

ಇ. ರಾಜ್ಯದ ನೇಕಾರರಿಗೆ ರೂಪಿಸಿರುವ ಯೋಜನೆಗಳ ಕುರಿತು ದಿನಾಂಕ:12.08.2025ರ ಚುಕ್ಕೆ ಗುರುತಿನ **ಪ್ರಶ್ನೆ ಸಂಖ್ಯೆ:25(272)ಕ್ಕೆ** ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಶ್ರೀ ಕೇಶವ ಪ್ರಸಾದ್ ಎಸ್** ಅವರಿಂದ ಅರ್ಧ ಗಂಟೆ ಕಾಲಾವಧಿ ಚರ್ಚೆ.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

---

**ಪ್ರತಿ ದಿನದ ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿಯೂ ಸಹ ಪಡೆದುಕೊಳ್ಳಬಹುದು.**

**www.kla.kar.nic.in/council/council.htm**